**All India Radio: Bangalore**
**National Bulletin In Kannada**
**08.06.2025 / 1.10 pm**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

**<><*<><>*><>**

<u>ಮುಖ್ಯಾಂಶಗಳು</u>

೧. ಎನ್‌ಡಿಎ ಅಧಿಕಾರಾವಧಿಯಲ್ಲಿ ನಾರಿಕೇಂದ್ರಿತ ಅಭಿವೃದ್ಧಿ - ಪ್ರಧಾನಿ ನರೇಂದ್ರ ಮೋದಿ

೨. ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ಇಂದಿನಿಂದ ಏಳು ದಿನಗಳ ಐರೋಪ್ಯ ದೇಶಗಳ ಭೇಟಿ

೩. ಕೇಂದ್ರ ಕೃಷಿ ಸಚಿವಶಿವರಾಜ್ ಸಿಂಗ್ ಚೌಹಾಣ್ ಬೆಂಗಳೂರಿನಲ್ಲಿ ರೈತರೊಂದಿಗೆ ಸಂವಾದ

೪. ಉಲಾನ್‌ಬಾತರ್‌ನಲ್ಲಿ ಭಾರತ - ಮಂಗೋಲಿಯಾಪಡೆಗಳಿಂದ ಜಂಟಿ ಸೇನಾ ಸಮರಾಭ್ಯಾಸ

**************

ಅಭಿವೃದ್ಧಿ ಹೊಂದಿದ ಭಾರತದತ್ತ ಮುನ್ನಡೆಯುತ್ತಿರುವ ಸಂದರ್ಭದಲ್ಲಿ ಮಹಿಳೆಯರು ವಹಿಸಿರುವ ಪರಿವರ್ತನಾತ್ಮಕ ಪಾತ್ರವನ್ನು ಪ್ರಧಾನಿ ನರೇಂದ್ರ ಮೋದಿ ಪ್ರಮುಖವಾಗಿ ಪ್ರಸ್ತಾಪಿಸಿದ್ದಾರೆ. ಕಳೆದ ಹನ್ನೊಂದು ವರ್ಷಗಳಲ್ಲಿ ಮಹಿಳಾ ನೇತೃತ್ವದ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಹೆಚ್ಚಿನ ಗಮನ ಹರಿಸಿದೆ ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರ, ಹನ್ನೊಂದು ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ವಿಜ್ಞಾನ, ಶಿಕ್ಷಣ, ಕ್ರೀಡೆ, ನವೋದ್ಯಮಗಳು ಹಾಗೂ ಸಶಸ್ತ್ರ ಪಡೆಗಳು ಸೇರಿದಂತೆಎಲ್ಲ ಕ್ಷೇತ್ರಗಳಲ್ಲಿ ಮಹಿಳೆಯರು ಶ್ರೇಷ್ಠತೆಯನ್ನು ಸಾಧಿಸುವ ಮೂಲಕ ಹಲವು ಮಂದಿಗೆ ಸ್ಫೂರ್ತಿ ನೀಡುತ್ತಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಪುನರುಚ್ಚರಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಪ್ರಧಾನಿ, ಎನ್‌ಡಿಎ ಸರ್ಕಾರವು ಪ್ರಭಾವಶಾಲಿ ಉಪಕ್ರಮಗಳ ಸರಣಿಯ ಮೂಲಕ ಮಹಿಳಾ ನಾಯಕತ್ವದ ಅಭಿವೃದ್ಧಿಯನ್ನು ಮರು ವ್ಯಾಖ್ಯಾನಿಸಿದೆ ಎಂದು ವಿವರಿಸಿದ್ದಾರೆ. 'ಸ್ವಚ್ಛ ಭಾರತಅಭಿಯಾನ'ದ ಮೂಲಕ ಮಹಿಳೆಯರ ಘನತೆಯನ್ನು ಖಾತರಿ ಪಡಿಸುವುದು, 'ಜನ್‌ಧನ್ ಖಾತೆಗಳ' ಮೂಲಕ ವಿತ್ತೀಯ

ಸೇರ್ಪಡೆ, ತಳಮಟ್ಟದಲ್ಲಿ ಸಬಲೀಕರಣಗಳು ಇದರಲ್ಲಿ ಸೇರಿವೆ. 'ಉಜ್ವಲ ಯೋಜನೆ' ಮೂಲಕ ಹಲವು ಮನೆಗಳನ್ನು ಹೊಗೆ ಮುಕ್ತ ಅಡುಗೆ ಮನೆಗಳನ್ನಾಗಿ ಪರಿವರ್ತಿಸುತ್ತಿರುವುದು ಸರ್ಕಾರದ ಸಾಧನೆ. 'ಮುದ್ರಾ ಯೋಜನೆಯಡಿ' ಲಕ್ಷಾಂತರ ಮಹಿಳೆಯರು ಉದ್ಯಮಿಗಳಾಗಲು ಸ್ವತಂತ್ರವಾಗಿತಮ್ಮ ಕನಸುಗಳನ್ನು ನನಸಾಗಿಸಿಕೊಳ್ಳಲು ಹೇಗೆ ಅನುವು ಮಾಡಿಕೊಟ್ಟಿದೆ ಎಂಬುದನ್ನು ಅವರು ವಿವರಿಸಿದ್ದಾರೆ. 'ಪ್ರಧಾನಮಂತ್ರಿ ಆವಾಸ್‌ಯೋಜನೆ'ಯಡಿ ಮಹಿಳೆಯರ ಹೆಸರಿನಲ್ಲಿ ಮನೆಗಳನ್ನು ಒದಗಿಸುವುದು. ಅವರ ಸುರಕ್ಷತೆ ಹಾಗೂ ಸಬಲೀಕರಣ ಪ್ರಜ್ಞೆಯ ಮೇಲೆ ಪರಿಣಾಮ ಬೀರಿದೆ. 'ಬೇಟಿ ಬಚಾವೋ, ಬೇಟಿ ಪಡಾವೊ,' ಹೆಣ್ಣು ಮಗುವನ್ನು ರಕ್ಷಿಸುವ ರಾಷ್ಟ್ರೀಯ ಆಂದೋಲನವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

**************

ವಿದೇಶಾಂಗ ವ್ಯವಹಾರಗಳ ಸಚಿವಡಾ.ಎಸ್.ಜೈಶಂಕರ್, ಫ್ರಾನ್ಸ್, ಐರೋಪ್ಯ ಒಕ್ಕೂಟ ಹಾಗೂ ಬೆಲ್ಜಿಯಂ ದೇಶಗಳಿಗೆ ಇಂದಿನಿಂದ ಏಳು ದಿನಗಳ ಅಧಿಕೃತ ಪ್ರವಾಸ ಕೈಗೊಳ್ಳಲಿದ್ದಾರೆ. ತಮ್ಮ ಫ್ರಾನ್ಸ್ ಭೇಟಿಯ ವೇಳೆ ವಿದೇಶಾಂಗ ಸಚಿವರು, ಪ್ಯಾರೀಸ್ ಮತ್ತು ಮಾರ್ಸೆಲ್‌ಗೆ ಪ್ರಯಾಣಿಸಲಿದ್ದು, ಫ್ರಾನ್ಸ್‌ನ ವಿದೇಶಾಂಗ ವ್ಯವಹಾರಗಳ ಸಚಿವಜೀನ್ ನೋಯಲ್ ಬ್ಯಾರಟ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಫ್ರಾನ್ಸ್‌ನ ಹಿರಿಯ ನಾಯಕರನ್ನೂ ಸಹ ಭೇಟಿ ಮಾಡಲಿರುವ ಸಚಿವ ಡಾ.ಎಸ್.ಜೈಶಂಕರ್, ಅಲ್ಲಿನ ಚಿಂತಕರ ಚಾವಡಿ ಮತ್ತು ಮಾಧ್ಯಮಗಳೊಂದಿಗೆ ಸಂವಹನ ನಡೆಸಲಿದ್ದಾರೆ. ಅಲ್ಲದೆ, ಮೆಡಿಟೇರಿಯನ್ ರೈಸಿನಾ ಸಂವಾದದ ಉದ್ಘಾಟನಾ ಸಮಾರಂಭದಲ್ಲೂ ಅವರು ಪಾಲ್ಗೊಳ್ಳಲಿದ್ದಾರೆ. ಈ ನಡುವೆ ತಮ್ಮ ಐರೋಪ್ಯ ಒಕ್ಕೂಟದ ಭೇಟಿಯ ವೇಳೆ ಡಾ.ಎಸ್.ಜೈಶಂಕರ್ ಅವರು, ಐರೋಪ್ಯ ಆಯೋಗ ಹಾಗೂ ಯೂರೋಪ್ ಸಂಸತ್ತಿನ ಹಿರಿಯ ನಾಯಕತ್ವದೊಂದಿಗೆ ಸಮಾಲೋಚನೆ ನಡೆಸಲಿದ್ದಾರೆ. ಬೆಲ್ಜಿಯಂ ಭೇಟಿಯ ಸಮಯದಲ್ಲಿ ಸಚಿವರು, ಬೆಲ್ಜಿಯಂನ ಉಪಪ್ರಧಾನಮಂತ್ರಿ ಹಾಗೂ ವಿದೇಶಾಂಗ ಸಚಿವ ಮ್ಯಾಕ್ಸಿಮ್ ಪ್ರಿವೋಟ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಬೆಲ್ಜಿಯಂನ ಹಿರಿಯ ನಾಯಕರನ್ನೂ ಸಹ ಭೇಟಿ ಮಾಡಲಿದ್ದಾರೆ. ಭಾರತೀಯ ಮೂಲದ ಸದಸ್ಯರೊಂದಿಗೆ ಸಂವಾದ ನಡೆಸಲಿದ್ದಾರೆ. ಈ ಭೇಟಿಯು ಐರೋಪ್ಯ ಒಕ್ಕೂಟ ಮತ್ತು ಬೆಲ್ಜಿಯಂ ಜೊತೆಗಿನ ಭಾರತದ ಸ್ನೇಹ ಸಂಬಂಧವನ್ನು ಮತಷ್ಟು ಗಟ್ಟಿಗೊಳಿಸುವ ನಿರೀಕ್ಷೆಯಿದೆ. ಇದು ವೈವಿಧ್ಯಮಯ ವಲಯಗಳಲ್ಲಿ ಮುಂದುವರೆದಿರುವ ಸಹಕಾರಕ್ಕೆ ಹೊಸ ವೇಗವನ್ನು ನೀಡುತ್ತದೆ ಎಂದು ವಿದೇಶಾಂಗ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

**************

ಕೇಂದ್ರ ಕೃಷಿ ಮತ್ತುರೈತಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಬೆಂಗಳೂರಿಗೆ ಇಂದು ಆಗಮಿಸಿದ್ದಾರೆ. ಬೆಂಗಳೂರಿನ ಭಾರತೀಯ ಕೃಷಿ ಸಂಶೋಧನಾ ಮಂಡಳಿ ಮತ್ತುಕೇಂದ್ರ ಕೃಷಿ ಮತ್ತುರೈತಕಲ್ಯಾಣ ಸಚಿವಾಲಯ ಸಹಯೋಗದಲ್ಲಿ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯ ಆವರಣದಲ್ಲಿ ಆಯೋಜಿಸಿರುವ 'ವಿಕಸಿತ ಕೃಷಿ ಸಂಕಲ್ಪ ಅಭಿಯಾನ' ಕಾರ್ಯಕ್ರಮದಲ್ಲಿ ಸಚಿವರು ಭಾಗವಹಿಸಿದ್ದಾರೆ. ಸ್ಥಳೀಯ ರೈತರಾದ ಅರುಣ್‌ಕುಮಾರ್ ಡ್ರ್ಯಾಗನ್ ಫ್ರೂಟ್ ಬೆಳೆಯುವ ಮೂಲಕ ಸುತ್ತಮುತ್ತಲಿನ ರೈತರ ಗಮನ ಸೆಳೆದಿದ್ದಾರೆ. ಅವರೊಂದಿಗೆ ಸಚಿವರು ಸಂವಾದ ನಡೆಸಿದರು.

**************

ಭಾರತ ಮತ್ತು ಮಂಗೋಲಿಯಾ ನಡುವಣ ಜಂಟಿ ಸೇನಾ ಸಮರಾಭ್ಯಾಸ ನೊಮಾಡಿಕ್ ಎಲಿಫೆಂಟ್-೨೦೨೫ ರ ೧೭ ಆವೃತ್ತಿ ಮಂಗೋಲಿಯಾದ ಉಲಾನ್ ಬಾತಾರ್‌ನಲ್ಲಿರುವ ವಿಶೇಷ ಪಡೆಗಳ ತರಬೇತಿ ಕೇಂದ್ರಗಳಲ್ಲಿ ನಡೆಸಲಾಗುತ್ತಿದೆ. ವಿಶ್ವಸಂಸ್ಥೆಯ ಆದೇಶದಡಿಯಲ್ಲಿ ಅರೆ ನಗರ ಮತ್ತು ಪರ್ವತ ಪ್ರದೇಶಗಳಲ್ಲಿ ಅಸಂಪ್ರದಾಯಿಕ ಕಾರ್ಯಾಚರಣೆ ನಡೆಸುವುದರ ಮೇಲೆ ಕೇಂದ್ರೀಕರಿಸಿ ಈ ಅಭ್ಯಾಸವನ್ನು ನಡೆಸಲಾಗುತ್ತಿದೆ. ಕಳೆದ ತಿಂಗಳ ೩೧ರಂದು ಪ್ರಾರಂಭವಾದ ಜಂಟಿ ಸೇನಾ ಅಭ್ಯಾಸವು ಈ ತಿಂಗಳ ೧೩ ರಂದು ಸಮಾಪನಗೊಳ್ಳಲಿದೆ. ಸೇನಾ ಸಮರಾಭ್ಯಾಸವು, ಎರಡು ಸೇನೆಗಳ ಕಾರ್ಯಾಚರಣೆ ಸಾಮರ್ಥ್ಯ ಹೆಚ್ಚಿಸುವ ಗುರಿ ಹೊಂದಿದೆ. ಕಾರ್ಯಾಚರಣೆಯಲ್ಲಿ ಭಾಗವಹಿಸುವ ತುಕಡಿಗಳು ಭಯೋತ್ಪಾದನೆ ನಿಗ್ರಹ ಕಾರ್ಯಾಚರಣೆ ಹಾಗೂ ನಿಖರವಾದ ಸ್ನೈಪ್ಪಿಂಗ್‌ನಲ್ಲಿ ಪಾಲ್ಗೊಳ್ಳುವ ತುಕಡಿಗಳು ಉತ್ತಮ ಆಚರಣೆ ವಿನಿಮಯ ಮಾಡಿಕೊಳ್ಳುತ್ತವೆ. ಇದರಿಂದ ಸಮಕಾಲಿನ ಭದ್ರತಾ ಸವಾಲುಗಳಿಗೆ ಪರಿಣಾಮಕಾರಿಯಾಗಿ ಪ್ರತಿಕ್ರಿಯಿಸುವ ಸಾಮರ್ಥ್ಯ ಬಲಪಡಿಸಲು ಎರಡೂ ಪಡೆಗಳು ಕೆಲಸ ಮಾಡುತ್ತಿವೆ. ಜಂಟಿ ಸಮರಾಭ್ಯಾಸವು ಭಾರತ ಮತ್ತು ಮಂಗೋಲಿಯಾ ನಡುವೆ ಬೆಳೆಯುತ್ತಿರುವ ರಕ್ಷಣಾ ಸಹಕಾರವನ್ನು ಪ್ರತಿಬಿಂಬಿಸುತ್ತದೆ. ಅಭ್ಯಾಸದಲ್ಲಿ ಪಾಲ್ಗೊಳ್ಳುವ ಪಡೆಗಳ ನಡುವೆ ಸಾಂಸ್ಕೃತಿಕ ತಿಳುವಳಿಕೆ ಮತ್ತು ಸೌಹಾರ್ದತೆಯನ್ನು ಬೆಳೆಸುವತ್ತ ಈ ಸಮರಾಭ್ಯಾಸವು ಬಲವಾದ ತಿಳುವಳಿಕೆ ನೀಡುತ್ತದೆ.

**************

ಕಳೆದ ಒಂದು ದಶಕದಲ್ಲಿ ಭಾರತ ಸರ್ವತೋಮುಖವಾಗಿಗಮನಾರ್ಹ ಬದಲಾವಣೆಯನ್ನುಕಂಡಿದ್ದು, ಸೇವೆ, ಸುಶಾಸನ ಮತ್ತು ಬಡವರಕಲ್ಯಾಣದತತ್ವದಡಿ

ಮುನ್ನಡೆಯುತ್ತಿದೆ.ಕೇಂದ್ರ ಸರ್ಕಾರ ಕಳೆದ ೧೧ ವರ್ಷಗಳಲ್ಲಿ ಕೈಗೊಂಡಿರುವ ಹಲವು ಪ್ರಮುಖ ಪ್ರಯತ್ನಗಳ ಕುರಿತುಆಕಾಶವಾಣಿ ಸುದ್ದಿ ವಿಭಾಗ ವಿಶೇಷ ವರದಿಯನ್ನು ಪ್ರಸಾರ ಮಾಡುತ್ತಿದೆ.ಇಂದು, ಜೀವನದಲ್ಲಿ ಸುಲಭತೆ - ಸುಧಾರಣೆಗಳು ಮತ್ತು ಉಪಕ್ರಮಗಳು ಪ್ರತಿಯೊಬ್ಬ ನಾಗರಿಕನದೈನಂದಿನ ಜೀವನವನ್ನು ಹೇಗೆ ಸರಳ, ಹೆಚ್ಚು ಸುರಕ್ಷಿತ ಮತ್ತುಘನತೆಯಿಂದಕೂಡಿದೆಎಂಬುದರಕುರಿತ ವರದಿ ಮೂಡಿಬರಲಿದೆ.

ವರದಿ...

ಕಳೆದ ದಶಕದಲ್ಲಿ ಮಧ್ಯಮ ವರ್ಗದವರದೈನಂದಿನ ಜೀವನವನ್ನು ಸುಧಾರಿಸುವುದು ಸರ್ಕಾರದಕೇಂದ್ರಬಿಂದುವಾಗಿದೆ.ವಸತಿ ಮತ್ತುಆರೋಗ್ಯರಕ್ಷಣೆಯಿಂದ ನಗರ ಚಲನಶೀಲತೆ ಮತ್ತುಡಿಜಿಟಲ್ ಪ್ರವೇಶದವರೆಗೆ, ಮಧ್ಯಮ ವರ್ಗದವರಿಗೆಜೀವನವನ್ನು ಸರಳ, ಹೆಚ್ಚು ಸುರಕ್ಷಿತ ಮತ್ತುಅನುಕೂಲಕರವಾಗಿಸಲು ಸರ್ಕಾರ ನಿರಂತರ ಪ್ರಯತ್ನಗಳನ್ನು ಮಾಡಿದೆ. ಪ್ರಧಾನ ಮಂತ್ರಿಆವಾಸ್‌ಯೋಜನೆ (ನಗರ) ಅಡಿಯಲ್ಲಿ, ೧.೧೭ ಕೋಟಿಗೂ ಹೆಚ್ಚು ಮನೆಗಳನ್ನು ಮಂಜೂರು ಮಾಡಲಾಗಿದೆ ಮತ್ತು ಸುಮಾರು ೯೩ ಲಕ್ಷ ಮನೆಗಳನ್ನು ಈಗಾಗಲೇ ಪೂರ್ಣಗೊಳಿಸಲಾಗಿದೆ ಅಥವಾ ಹಸ್ತಾಂತರಿಸಲಾಗಿದೆ.ಸ್ಮಾರ್ಟ್ ಸಿಟಿ ಮಿಷನ್‌ಅಡಿಯಲ್ಲಿ ೭ ಸಾವಿರದ ೫೪೫ ಅನುಮೋದಿತ ಯೋಜನೆಗಳಲ್ಲಿ ೯೩ ಪ್ರತಿಶತಕ್ಕೂ ಹೆಚ್ಚು ಪೂರ್ಣಗೊಂಡಿರುವ ಮೂಲಕ ಮೂಲ ಸೌಕರ್ಯವನ್ನು ಪರಿವರ್ತಿಸಿದೆ. ಒಂದು ದಶಕದಲ್ಲಿ ಮೆಟ್ರೋಜಾಲವು ನಾಲ್ಕು ಪಟ್ಟು ಹೆಚ್ಚಾಗಿದ್ದು, ೨೦೧೪ ರಲ್ಲಿ ಕೇವಲ ೨೪೮ ಕಿಲೋಮೀಟರ್‌ಗಳಿಂದ ೨೦೨೫ ರಲ್ಲಿ ೧ ಸಾವಿರ ಕಿಲೋಮೀಟರ್‌ಗಳಿಗೂ ಹೆಚ್ಚಿದೆ. ಉಡಾನ್‌ಯೋಜನೆಯು ವಿಮಾನ ಪ್ರಯಾಣವನ್ನು ಕೈಗೆಟುಕುವ ಮತ್ತು ಸಾಮಾನ್ಯ ಜನರಿಗೆ ಪ್ರವೇಶಿಸುವಂತೆ ಮಾಡಿದೆ, ೬೨೫ ಮಾರ್ಗಗಳ ಮೂಲಕ ೮೮ ವಿಮಾನ ನಿಲ್ದಾಣಗಳನ್ನು ಸಂಪರ್ಕಿಸುತ್ತದೆ. ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆಯು ವಿಶ್ವದ ಅತಿದೊಡ್ಡ ಸಾರ್ವಜನಿಕ ನಿಧಿಯ ಆರೋಗ್ಯ ಭರವಸೆ ಯೋಜನೆಗಳಲ್ಲಿ ಒಂದಾಗಿ ಹೊರಹೊಮ್ಮಿದೆ - ೪೧ ಕೋಟಿಗೂ ಹೆಚ್ಚು ಆಯುಷ್ಮಾನ್ ಕಾರ್ಡ್‌ಗಳನ್ನು ನೀಡಲಾಗಿದೆ. ಈಗ ೧೬ ಸಾವಿರಕ್ಕೂ ಹೆಚ್ಚು ಸಂಖ್ಯೆಯ ಜನಔಷಧಿ ಕೇಂದ್ರಗಳ ಮೂಲಕ ಗುಣಮಟ್ಟದ ಔಷಧಿಗಳನ್ನು ಶೇಕಡಾ ೮೦ ರಷ್ಟು ಅಗ್ಗವಾಗಿಸಿದೆ ಮತ್ತು ಅಗತ್ಯ ಔಷಧಿಗಳನ್ನು ಸಾಮಾನ್ಯ ನಾಗರಿಕರಿಗೆ ತಲುಪುವಂತೆ ಮಾಡಿದೆ. ಡಿಜಿ-ಲಾಕರ್‌ನಂತಹ ವೇದಿಕೆಗಳು ಭೌತಿಕ ಪ್ರತಿಗಳನ್ನು ಸಾಗಿಸುವ ಅಥವಾ ಸಲ್ಲಿಸುವಅಗತ್ಯವನ್ನುಕಡಿಮೆ ಮಾಡಿದೆ. ೫೨ ಕೋಟಿಗೂ ಹೆಚ್ಚು ಬಳಕೆದಾರರು ಇದರ ಪ್ರಯೋಜನ ಪಡೆಯುತ್ತಿದ್ದಾರೆ.೮ ಕೋಟಿಗೂ ಹೆಚ್ಚು ಬಳಕೆದಾರರನ್ನು ಹೊಂದಿರುವ ಉಮಂಗ್ ಅಪ್ಲಿಕೇಶನ್ ೨೦೦ ಕ್ಕೂ ಹೆಚ್ಚು ಇಲಾಖೆಗಳಿಂದ ಸೇವೆ

ಒದಗಿಸುತ್ತಿದ್ದು, ಎಲ್ಲಾ ಸೇವೆಗಳು ಒಂದೇ ಸ್ಥಳದಲ್ಲಿ ಲಭ್ಯವಾಗುತ್ತಿವೆ. ಆಧಾರ್ ಈಗ ೧೪೧ ಕೋಟಿಗೂ ಹೆಚ್ಚು ನಾಗರಿಕರನ್ನು ಒಳಗೊಂಡಿದ್ದು, ಕಲ್ಯಾಣ ವಿತರಣೆಯನ್ನು ಸುಗಮಗೊಳಿಸುತ್ತಿದೆ ಮತ್ತು ಸೋರಿಕೆಯನ್ನು ಕಡಿಮೆ ಮಾಡುತ್ತಿದೆ. ಒಟ್ಟಾರೆ ಈ ಉಪಕ್ರಮಗಳು ಭಾರತದ ಮಧ್ಯಮ ವರ್ಗದವರು ಹೆಮ್ಮೆ, ಅನುಕೂಲತೆ ಮತ್ತುಆತ್ಮವಿಶ್ವಾಸದಿಂದ ಬದುಕುವುದನ್ನುಖಚಿತಪಡಿಸುತ್ತವೆ.

**************

ಭಾರೀ ಮಳೆಯಿಂದ ಉತ್ತರ ಸಿಕ್ಕಿಂನ ಚಾಟೆನ್‌ನಲ್ಲಿ ಸಿಲುಕಿರುವ ಸ್ಥಳೀಯರು, ಪ್ರವಾಸಿ ಟ್ಯಾಕ್ಸಿಚಾಲಕರು ಹಾಗೂ ಕೆಲ ಸರ್ಕಾರಿ ಅಧಿಕಾರಿಗಳನ್ನು ಸ್ಥಳಾಂತರಿಸಲು ಸಿಕ್ಕಿಂ ಸರ್ಕಾರ ವಿಶೇಷ ಹೆಲಿಕಾಪ್ಟರ್ ವ್ಯವಸ್ಥೆ ಮಾಡಿದೆ. ಇತ್ತೀಚಿನ ಪ್ರತಿಕೂಲ ಹವಾಮಾನ ಪರಿಸ್ಥಿತಿಯಿಂದಾಗಿ ಸಾಮಾನ್ಯರಸ್ತೆ ಸಂಪರ್ಕ ಅಸ್ತವ್ಯಸ್ತಗೊಂಡಿದ್ದು, ಪ್ರದೇಶದ ಸಂಪರ್ಕಕಡಿತಗೊಂಡಿದೆ. ಈ ಹಿನ್ನೆಲೆಯಲ್ಲಿ ಪರಿಹಾರ ಹಾಗೂ ಸಿಲುಕಿರುವವರ ಸ್ಥಳಾಂತರಗೊಳಿಸುವ ಪ್ರಯತ್ನಗಳ ಭಾಗವಾಗಿ ಈ ಕಾರ್ಯಾಚರಣೆ ನಡೆದಿದೆ.

**************

ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ ಡೇವಿಡ್ ಲ್ಯಾಮಿ ನಿನ್ನೆ ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ಉಭಯ ದೇಶಗಳ ನಡುವಣ ದ್ವಿಪಕ್ಷೀಯ ಸಂಬಂಧದಲ್ಲಿ ಹೆಚ್ಚುತ್ತಿರುವ ಗತಿಯನ್ನು ಸ್ವಾಗತಿಸಿರುವ ಪ್ರಧಾನಿ ಮೋದಿ, ಆಳವಾದ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಗೆ ತೃಪ್ತಿ ವ್ಯಕ್ತಪಡಿಸಿದ್ದಾರೆ. ತಂತ್ರಜ್ಞಾನ ಭದ್ರತಾ ಉಪ ಕ್ರಮದಡಿ ನಿರಂತರ ಸಹಯೋಗವನ್ನು ಸ್ವಾಗತಿಸಿದ ಪ್ರಧಾನಿ, ವಿಶ್ವಾಸಾರ್ಹ ಮತ್ತು ಸುರಕ್ಷಿತ ನಾವೀನ್ಯ ಪರಿಸರ ವ್ಯವಸ್ಥೆಗಳನ್ನು ರೂಪಿಸುವ ಸಾಮರ್ಥ್ಯವನ್ನು ಪ್ರಸ್ತಾಪಿಸಿದ್ದಾರೆ. ವ್ಯಾಪಾರ ಹಾಗೂ ಹೂಡಿಕೆ, ರಕ್ಷಣೆ ಹಾಗೂ ಭದ್ರತೆ, ತಂತ್ರಜ್ಞಾನ, ನಾವೀನ್ಯತೆ ಹಾಗೂ ಶುದ್ಧಇಂಧನ ಸೇರಿದಂತೆ ಪ್ರಮುಖ ಕ್ಷೇತ್ರಗಳಲ್ಲಿ ಸಹಕಾರ ಮತ್ತಷ್ಟು ಹೆಚ್ಚಿಸುವಲ್ಲಿ ಬ್ರಿಟನ್ ಬಲವಾದ ಆಸಕ್ತಿ ಹೊಂದಿದೆ ಎಂದು ವಿದೇಶಾಂಗ ಕಾರ್ಯದರ್ಶಿ ಡೇವಿಡ್ ಲ್ಯಾಮಿ ತಿಳಿಸಿದರು. ಮುಕ್ತ ವ್ಯಾಪಾರ ಒಪ್ಪಂದ ಎರಡೂ ದೇಶಗಳಿಗೆ ಹೊಸ ಆರ್ಥಿಕ ಅವಕಾಶಗಳನ್ನು ತೆರೆಯುತ್ತದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು. ಪ್ರಾದೇಶಿಕ ಹಾಗೂ ಜಾಗತಿಕ ವಿಷಯಗಳ ಕುರಿತು ಇಬ್ಬರು ನಾಯಕರುಅಭಿಪ್ರಾಯ ವಿನಿಮಯ ಮಾಡಿಕೊಂಡರು. ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ ಪಹಲ್ಗಾಮ್ ಭಯೋತ್ಪಾದಕ ದಾಳಿಯನ್ನು ಬಲವಾಗಿ ಖಂಡಿಸಿದರು. ಗಡಿಯಾಚೆಗಿನ ಭಯೋತ್ಪಾದನೆ ವಿರುದ್ಧ ಭಾರತದ ಹೋರಾಟಕ್ಕೆ ಬೆಂಬಲ

ವ್ಯಕ್ತಪಡಿಸಿದರು. ಭಯೋತ್ಪಾದನೆ ಮತ್ತುಅದನ್ನು ಬೆಂಬಲಿಸುವವರ ವಿರುದ್ಧ ನಿರ್ಣಾಯಕ ಅಂತಾರಾಷ್ಟ್ರೀಯ ಕ್ರಮದ ಅಗತ್ಯವನ್ನು ಪ್ರಧಾನಿ ಮೋದಿ ಒತ್ತಿ ಹೇಳಿದರು.

**************

ತೆಲಂಗಾಣದ ಕಾಂಗ್ರೆಸ್ ನೇತೃತ್ವದ ರಾಜ್ಯ ಸಚಿವ ಸಂಪುಟಕ್ಕೆ ಇನ್ನೂ ಮೂವರು ಸಚಿವರನ್ನು ಸೇರಿಸಿಕೊಳ್ಳಲಾಗುವುದು. ಇಂದು ಮಧ್ಯಾಹ್ನ ಹೈದರಾಬಾದ್ ರಾಜಭವನದಲ್ಲಿ ಪ್ರಮಾಣವಚನ ಸ್ವೀಕಾರ ಸಮಾರಂಭ ನಡೆಯಲಿದೆ. ಜಿ. ವಿವೇಕ್ ವೆಂಕಟಸ್ವಾಮಿ, ಎ.ಲಕ್ಷ್ಮಣ್ ಹಾಗೂ ವಾಕಿಟಿ ಶ್ರೀಹರಿ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲಾಗುವುದು. ಇದರೊಂದಿಗೆ ತೆಲಂಗಾಣದಲ್ಲಿ ಸಂಪುಟ ಸದ್ಯಸರ ಸಂಖ್ಯೆ ೧೫ ಕ್ಕೆ ಏರಿಕೆಯಾಗಲಿದೆ. ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆಎಲ್ಲಾ ವ್ಯವಸ್ಥೆಗಳನ್ನು ಮಾಡಲಾಗಿದೆ. ರಾಮಚಂದ್ರ ನಾಯ್ಕ್ ವಿಧಾನಸಭೆಯ ಉಪ ಸಭಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

**************